ಸಿ.ಸಿ..ನಂ.299–2022

ಪಿ.ಡಬ್ಲ್ಯೂ–1

ದಿನಾಂಕ. 03–09–2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಆರೋಪಿ ಪರ ಶ್ರೀ ಎನ್ ಎಸ್ ಪಿ ವಕೀಲರಿಂದಃ

1. ಆರೋಪಿಯು ಈ ಸಾಲದ ಖಾತೆಗೆ ಸಂಬಂಧಿಸಿದಂತೆ ಸ್ವಲ್ಪ ಹಣ ತುಂಬಿರುತ್ತಾನೆ . ಅದರ ಬಗ್ಗೆ ಮಾಹಿತಿ ಲೆಡ್ಜರ extract ನಲ್ಲಿ ಇರುತ್ತದೆ . ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನಾನು ತಯಾರು ಇರುತ್ತೇನೆ ಎಂದರೆ ಸರಿ. ವಾಹನ ಸಾಲದ ಕಾಗದ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಲು ತಯಾರಿರುತ್ತೀರಿ ಎಂದರೆ ಸರಿ. ಅದೇ ರೀತಿ ಠರಾವಿನ ಮೂಲ ಪ್ರತಿ ಹಾಜರು ಪಡಿಸಲು ನೀವು ತಯಾರಿರುತ್ತೀರಿ ಎಂದರೆ ಸರಿ. ಈ ಸಾಲಕ್ಕೆ ಸಂಬಂಧಿಸಿದಂತೆ ಬ್ಯಾಂಕಿನಲ್ಲಿ audit ಆಗಿರುತ್ತದೆ . ಅದರ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರ ಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ . ಅರೋಪಿಯು ಸಾಲವನ್ನು ಪಡೆದುಕೊಳ್ಳುವ ಸಮಯದಲ್ಲಿ member ship ಪಡೆದುಕೊಂಡಿದ್ದು ಅದರ ಬಗ್ಗೆ ದಾಖಲಾತಿ ಹಾಜರು ಪಡಿಸಲು ತಯಾರಿರುತ್ತೀರಿ ಎಂದರೆ ಸದ್ರಿ member ship ನಂಬರ ledger extract ದಲ್ಲಿ ನಮೂದು ಆಗಿರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಸರಿ . ಆತನು ಸಾಲದ ಖಾತೆ ಮಾಡುವ ಸಮಯದಲ್ಲಿ ಆತನಿಂದ ಒಂದು ಉಳಿತಾಯದ ಖಾತೆ ಮಾಡಿಕೊಂಡಿರುತ್ತೀರಿ ಎಂದರೆ ಸರಿ . ಅದರ statement of account ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ . ಈ ಸಾಲ ಮಾಡಿಕೊಳ್ಳುವಾಗ ಎಷ್ಟು ಹಣ ಡಿಪೊಜಿಟ್ ಮಾಡಿಕೊಂಡಿರುತ್ತೀರಿ ಎಂದರೆ ಡಿಪೊಜಿಟ್ ಇರುವುದಿಲ್ಲ . ಈ ಸಾಲಕ್ಕೆ ಸಂಬಂಧಿಸಿದಂತೆ ನೀವು RD ಮಾಡಿಕೊಂಡಿರುತ್ತೀರಿ ಎಂದರೆ ಸರಿ . ಅದರ ಬಗ್ಗೆ ದಾಖಲಾತಿ ನ್ಯಾಯಾಲಯಕ್ಕೆ ಹಾಜರ ಪಡಿಸಲು ತೊಂದರೆ ಇಲ್ಲ ಎಂದರೆ ಸರಿ . ಈ ಪ್ರಕರಣಕ್ಕೆ ಸಂಬಧಿಸಿದ ಇನ್ನೊಂದು ಸಿವಿಲ್ ಪ್ರಕರಣದ execution case ನಲ್ಲಿ ಎಷ್ಟು ಹಣ ವನ್ನು ಅರೋಪಿಯು ಡಿಪೊಜಿಟ್ ಮಾಡಿರುತ್ತಾನೆ ಎಂದು ದಾಖಲಾತಿ ಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ . .

( ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.